# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 414 (475) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು |
| ಉತ್ತರಿಸುವ ದಿನಾಂಕ | : | 30-01-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ವಿಷಯ | ಉತ್ತರ |
|---|---|---|
| ಅ) | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಭೋವಿ ನಿಗಮ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಲವಾರು ನಿಗಮಗಳು ಹಂಚಿಕೆಯಾದ ಅನುದಾನವನ್ನು ಖರ್ಚು ಮಾಡದೇ ಬೃಹತ್ ಪ್ರಮಾಣದಲ್ಲಿ ಉಳಿಸಿಕೊಂಡಿರುವುದು ನಿಜವೇ; | ಹೌದು,<br>ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ) | ಅಂತರಜಾತಿ ವಿವಾಹ ಮತ್ತು ಸರಳ ವಿವಾಹ ಯೋಜನೆಯ ಸ್ಥಿತಿಗತಿ ಏನು ಮತ್ತು ಈ ಯೋಜನೆಯಡಿ 2025 ನೇ ಸಾಲಿನ ಎಷ್ಟು ಅರ್ಜಿಗಳು ಬಾಕಿ ಇವೆ ಮತ್ತು ಈ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ವಿಲೇ ಮಾಡಲಾಗುವುದು. | ಅಂತರ್ಜಾತಿ ವಿವಾಹ ಕಾರ್ಯಕ್ರಮದಡಿ 2025-26 ನೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 3036 ಅರ್ಜಿಗಳು ಬಾಕಿ ಇರುತ್ತವೆ ಮತ್ತು ಸರಳ ವಿವಾಹ ಕಾರ್ಯಕ್ರಮದಡಿ 2025-26 ನೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 893 ಅರ್ಜಿಗಳು ಬಾಕಿ ಇರುತ್ತವೆ. ಸದರಿ ಅರ್ಜಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಅರ್ಜಿ ಸಲ್ಲಿಕೆಯ ಜೇಷ್ಠತೆಯ ಆಧಾರದ ಮೇಲೆ ನಿಯಮಾನುಸಾರ ಪರಿಶೀಲಿಸಿ ಜಿಲ್ಲೆಗಳಲ್ಲಿ ಪ್ರೋತ್ಸಾಹಧನ ಮಂಜೂರು ಮಾಡಲಾಗುವುದು. |
| ಇ) | ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಅರಣ್ಯವಾಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಈ ಹಿಂದೆ ಭರವಸೆ ನೀಡಿದ ವಿಶೇಷ ನೇರ ನೇಮಕಾತಿಯ ಸ್ಥಿತಿಗತಿ ಏನು; | ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರವನ್ನು ಅನುಬಂಧ-02 ರಲ್ಲಿ ಸಿದ್ಧಪಡಿಸಿ ಮಾಹಿತಿಯನ್ನು ಒದಗಿಸಲಾಗಿದೆ. |
| ಈ) | ಜಿಲ್ಲಾ ಮಟ್ಟದಲ್ಲಿ ಸಾಂತ್ವನ ಕೇಂದ್ರಗಳು ಮತ್ತು ವಸತಿ ಶಾಲೆಗಳ ತಪಾಸಣಾ ವರದಿಗಳನ್ನು ಎಷ್ಟು ಬಾರಿ ಮೇಲ್ವಿಚಾರಣೆ ಮಾಡಲಾಗುತ್ತದೆ; ಅಕ್ರಮಗಳು ಅಥವಾ ಸುರಕ್ಷತಾ ಸಮಸ್ಯೆಗಳು ವರದಿಯಾಗಿರುವ ಕೇಂದ್ರಗಳ ನಿರ್ವಹಣೆಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? | ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ವಸತಿ ನಿಲಯ/ವಸತಿ ಶಾಲೆಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾಲಕಾಲಕ್ಕೆ ಭೇಟಿ ನೀಡಿ ತಪಾಸಣೆ ಕೈಗೊಳ್ಳುತ್ತಾರೆ. ಭೇಟಿ ವೇಳೆ ಗಮನಿಸಲಾದ ನ್ಯೂನತೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಹಂತದಲ್ಲಿ ಸರಿಪಡಿಸಿ ತುರ್ತು ಕ್ರಮವನ್ನು ಕೈಗೊಳ್ಳಲಾಗುತ್ತದೆ. ಕರ್ತವ್ಯ ಲೋಪಕ್ಕೆ ಸಂಬಂಧಿಸಿದ ಪ್ರಕರಣಗಳು ವರದಿಯಾದಲ್ಲಿ ಜಿಲ್ಲಾ ಪಂಚಾಯತ್ ಹಂತದಲ್ಲಿ ಅಥವಾ ಕೇಂದ್ರ ಕಛೇರಿ ಹಂತದಲ್ಲಿ CCA ನಿಯಮಾವಳಿಗಳನ್ವಯ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು. |

**ಸಕಇ 65 ಎಸ್‌ಡಿಸಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:414 (475) ಕ್ಕೆ ಅನುಬಂಧ-1

## 1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

ಡಾ॥ ಬಿ.ಅರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಹಂಚಿಕೆಯಾದ ಅನುದಾನವನ್ನು ಖರ್ಚು ಮಾಡದೇ ಉಳಿಸಿಕೊಂಡಿರುವುದಕ್ಕೆ ಕಾರಣಗಳು

1. ಗಂಗಾ ಕಲ್ಯಾಣ ಯೋಜನೆಯಡಿ ಟರ್ನ ಕೀ ಆಧಾರದ ಮೇಲೆ ಕರೆದಿರುವ ಟೆಂಡರ್ ಬಗ್ಗೆ ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದು, ಜನವರಿ-2024 ರಲ್ಲಿ ಇತ್ಯರ್ಥವಾಗಿರುತ್ತದೆ. ನಂತರ ಕಾರ್ಯದೇಶಗಳನ್ನು ನೀಡಲಾಗಿದ್ದು, ಕೊಳವೆ ಬಾವಿ ಕೊರೆಯುವ ಕೆಲಸ ಪ್ರಗತಿಯಲ್ಲಿರುತ್ತದೆ. 2021-22 ನೇ ಸಾಲಿನಲ್ಲಿ ಟೆಂಡರ್ ವಿಳಂಬವಾಗಿರುತ್ತದೆ. 2021-22 ಮತ್ತು 2022-23 ನೇ ಸಾಲಿಗೆ ಸಂಬಂಧಿಸಿದಂತೆ DBT ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ಅರ್ಹ ಗುತ್ತಿಗೆದಾರರನ್ನು ಎಂಪ್ಯಾನಲ್ ಮಾಡಲಾಗಿದ್ದು ಕೊಳವೆ ಬಾವಿ ಕೊರೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
2. ಆರ್ಥಿಕ ಇಲಾಖೆಯ ನಿರ್ದೇಶನದಂತೆ ವಿವಿಧ ನಿಗಮಗಳ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾದ ಮೊತ್ತವನ್ನು ಪಿ.ಡಿ.ಖಾತೆಗೆ ವರ್ಗಾಯಿಸಲ್ಪಟ್ಟಿದ್ದರಿಂದ ಸಾಕಷ್ಟು ತಾಂತ್ರಿಕ ತೊಂದರೆಗಳನ್ನು ನಿವಾರಿಸಿ, ಹಣ ಪಾವತಿಸುವಲ್ಲಿ ವಿಳಂಬವಾಗಿರುತ್ತದೆ.
3. 2022-23 ಮತ್ತು 2023-24 ನೇ ಸಾಲುಗಳಲ್ಲಿ ನಿಗಮದ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ನೇರ ಸವಲತ್ತು ವರ್ಗಾವಣೆ ತಂತ್ರಾಂಶದ ಮುಖಾಂತರ ಹಣ ಬಿಡುಗಡೆ ಮಾಡಬೇಕಾಗಿದ್ದು, ಹಣ ಬಿಡುಗಡೆ ಮಾಡಲು ತಾಂತ್ರಿಕ ನ್ಯೂನ್ಯತೆಗಳಿದ್ದ ಕಾರಣ ಅನುದಾನವನ್ನು ಬಿಡುಗಡೆ ಮಾಡಲು ವಿಳಂಬವಾಗಿರುತ್ತದೆ.
4. ಕೆಲವೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಮಾನ್ಯ ಶಾಸಕರಿಂದ ಆಯ್ಕೆ ಸಮಿತಿ ಸಭೆ ನಡೆಸಿ ಆಯ್ಕೆ ಪಟ್ಟಿಯನ್ನು ನೀಡುವುದು ವಿಳಂಬವಾಗಿರುತ್ತದೆ.
5. ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಡಿ ಬ್ಯಾಂಕ್‌ವತಿಯಿಂದ ವಿವಿಧ ಕಾರಣಗಳಿಂದ ಮಂಜೂರಾತಿ ದೊರೆಯುವುದು ವಿಳಂಬವಾಗಿರುತ್ತದೆ.

ಈ ಮೆಲ್ಕಂಡ ಎಲ್ಲಾ ಕಾರಣಗಳಿಂದ ಹಣ ಬಿಡುಗಡೆಮಾಡಲು ವಿಳಂಬವಾಗಿರುತ್ತದೆ. ಹಾಗೂ ಪ್ರಸಕ್ತ ಸಾಲಿನಲ್ಲಿ ಬಾಕಿ ಉಳಿದ ಎಲ್ಲಾ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ.

## 2. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

2025-26ನೇ ಸಾಲಿನಲ್ಲಿ ರೂ.127.50 ಕೋಟಿ ಹಂಚಿಕೆಯಾಗಿದ್ದು ಈ ಅನುದಾನಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದಿಂದ ಅನುಮೋದನೆ ಪಡೆದು ವಿಧಾನಸಭಾ ಕ್ಷೇತ್ರವಾರು ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ನಿಗಧಿಪಡಿಸಲಾಗಿರುತ್ತದೆ. ಈ ಗುರಿಗಳಿಗೆ ಅನುಗುಣವಾಗಿ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾಪೇಕ್ಷಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಫಲಾಪೇಕ್ಷಿಗಳ ಆಯ್ಕೆಯಾದ ನಂತರ ಅವಶ್ಯ ದಾಖಲೆಗಳನ್ನು ಪಡೆದು ಪರಿಶೀಲಿಸಿ ಡಿ.ಬಿ.ಟಿ. ತಂತ್ರಾಂಶದ ಮೂಲಕ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.

**3. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ**

ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನವನ್ನು ಯೋಜನೆಗಳ ಅನುಷ್ಠಾನಕ್ಕೆ ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗಿದ್ದು, ವಿವಿಧ ಯೋಜನೆಗಳಡಿ ಆಯ್ಕೆಗೆ ಬಾಕಿ ಇರುವ ಮತ್ತು ಬಿಡುಗಡೆಗೆ ಬಾಕಿ ಇರುವ ಫಲಾನುಭವಿಗಳ ಅನುದಾನದ ಮೊತ್ತವನ್ನು ಮಾತ್ರ ನಿಗಮದಲ್ಲಿ ಉಳಿಸಿಕೊಳ್ಳಲಾಗಿರುತ್ತದೆ.

**4. ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ**

ಹಂಚಿಕೆಯಾದ ಅನುದಾನದಲ್ಲಿ ಖರ್ಜಾಗದೇ ರೂ.141.66 ಕೋಟಿಗಳು ಬಾಕಿ ಉಳಿದಿರುತ್ತವೆ.

**5. ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ.**

ಸರ್ಕಾರದಿಂದ ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಿದ ಅನುದಾನದಲ್ಲಿ ಪರಿಶಿಷ್ಟ ಜಾತಿಯ ಚರ್ಮಕುಶಲಕರ್ಮಿಗಳ ಜನಸಾಂದ್ರತೆಗೆ ಅನುಗುಣವಾಗಿ ಜಿಲ್ಲಾವಾರು ಗುರಿ ನಿಗಧಿಪಡಿಸಿ ಯೋಜನೆಗಳ ಸೌಲಭ್ಯವನ್ನು ಕಾಲಕಾಲಕ್ಕೆ ಒದಗಿಸಿ ಅನುದಾನವನ್ನು ಖರ್ಚು ಮಾಡಲಾಗಿರುತ್ತದೆ.

## ಅನುಬಂಧ -02

**ಸಮಾಜ ಕಲ್ಯಾಣ ಇಲಾಖೆಯಲ್ಲಿನ ಎ, ಬಿ, ಸಿ ಮತ್ತು ಡಿ ವೃಂದದ ಅಧಿಕಾರಿ/ನೌಕರರ ಮಂಜೂರಾತಿ, ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರ:**

| **ಕ್ರ.ಸಂ.** | **ವೃಂದ** | **ಖಾಲಿ** |
|---|---|---|
| 1 | ಗ್ರೂಪ್ " ಎ " | 49 |
| 2 | ಗ್ರೂಪ್ " ಬಿ " | 54 |
| 3 | ಗ್ರೂಪ್ " ಸಿ " | 1265 |
| 4 | ಗ್ರೂಪ್ " ಡಿ " | 6916 |
| | **ಒಟ್ಟು** | **8284** |

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.